OFFICE OF THE DIVISIONAL FOREST OFFICER, MANGALORE DIVISION, MANGALORE

No. C6. FOP. CR. 472/FCG/74-75 dated 8th January, 1979

In exercise of the powers conferred *vide* rule 158 of the Karnataka Forest Rules 1969, the Governor of Karnataka hereby notifies that the present Forest checking Gate existing at Ninthikal of Panja Range stands shifted to a new point in between 8 K.M. and 9 K.M. of Salethur village, Bantwal Taluk of Puttur Range and the gate remains closed all the 24 hours of the day. If shall start functioning at the new place (Salethur) with effect from 22-12-1978 with a view to prevent and check the commission of Forest offence in rspeot of Forest Produce and

(a) for examination of Forest produce prior to issuing a pass in respect there of under these rules or
(b) for production of examination of passes and way permits issued under these rules or
(c) for stoppage, reporting and examination of any personal animal, vehicle or vessel or
(d) in order that any mark required under these rules to be affixed to forest produce, may be affixed or
(e) for determining the amount of money, if any, payable on account thereof to the Government and for the payment of any money found to be due.

All the vehicles carrying timber, fuel, bamboos and other forest produco should stop at the above checking gate and produce permits for check, All timber, fuel, bamboos and other Forest prouuce, in transit shall be produced for examination at the said Chiecking Gate all the 24 hours of the day and any person contravening these instructions shall be liable for penalty under the Timber Transit Rules.

Explanation:—The expression "Checking Gate" in this notification includes any place within to furlongs thereof.

By Order and in the name of the Governor of Karnataka

99

(Sd.) Divisional Forest Officer,
Mangalore Division, Mangalore.

ಹೊಳೇನರಸೀಪುರ ತಾಲ್ಲೂಕು ಉಪ-ಕಾರಾಗೃಹದ ಅಧೀಕ್ಷಕರವರ ಕಛೇರಿ, ಹೊಳೇನರಸೀಪುರ

ಟೆಂಡರ್ ನೋಟಿಫಿಕೇಷನ್

ನಂ. ಎಲ್. 2. ಎಚ್. 17/78 ದಿನಾಂಕ 12ನೇ ಡಿಸೆಂಬರ್, 1978

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ, ಹೊಳೇನರಸೀಪುರದ ಉಪ-ಕಾರಾಗೃಹದ ಖೈದಿಗಳಿಗೆ ದಿನಾಂಕ 1-4-79 ರಿಂದ 31-3-1980ರ ವರೆಗೆ ಬೇಕಾಗುವ ಆಹಾರ ಸಾಮಾಗ್ರಿಗಳು ಮತ್ತು ಇತರೆ ಪದಾರ್ಥಗಳನ್ನು ಸರಬರಾಜು ಮಾಡುವ ಸಲುವಾಗಿ ಮೊಹರಾದ ಟೆಂಡರುಗಳನ್ನು ನಾಲ್ಕು ಪ್ರತಿಗಳಲ್ಲಿ ಹೊಳೇನರಸೀಪುರದ ಉಪ–ಕಾರಾಗೃಹದ ಅಧೀಕ್ಷಕರವರ ಕಛೇರಿಯಲ್ಲಿ ತಾ. 7-2-79ರ ಮಧ್ಯಾಹ್ನ 12-00 ಗಂಟೆಯವರೆಗೆ ಸ್ವೀಕರಿಸಲಾಗುವುದು ಇತರೆ ವಿವರಗಳಿಗೆ ಕೆಲಸದ ವೇಳೆಯಲ್ಲಿ ಆಫೀಸಿನಲ್ಲಿ ಪಡೆಯತಕ್ಕದ್ದು.

(ಸಹಿ.) ಅಧೀಕ್ಷಕರು,
ಉಪ-ಕಾರಾಗೃಹ ಕಛೇರಿ, ಹೊಳೇನರಸೀಪುರ.

122—10 ಬಿಡಿ ಪ್ರತಿಗಳು

ಜಿಲ್ಲಾ ಕಾರಾಗೃಹ ಅಧೀಕ್ಷಕರ ಕಛೇರಿ, ಮೈಸೂರು.

ಸಂಕ್ಷಿಪ್ತ ಟೆಂಡರು ಪ್ರಕಟಣೆ ದಿನಾಂಕ 8ನೇ ಜನವರಿ, 1979

ಮೈಸೂರು ಜಿಲ್ಲಾ ಕಾರಾಗೃಹದಲ್ಲಿ ದಿನಾಂಕ 1-4-79 ರಿಂದ 31-3-80 ರವರೆಗಿನ ಅವಧಿಯ ಪೂರ್ತಾ ಖೈದಿಗಳ ಉಪಯೋಗಕ್ಕಾಗಿ ಆಹಾರ ಸಾಮಾಗ್ರಿಗಳು, ಇತರ ವಸ್ತುಗಳು ಉತ್ಪನ್ನ ಕೇಂದ್ರಗಳಿಗೆ ಬೇಕಾಗುವ ಕಚ್ಚಾ ಮಾಲುಗಳನ್ನು ಸರಬರಾಜು ಮಾಡಲು ಮೊಹರಾದ ಟೆಂಡರುಗಳನ್ನು ವಿಧಾಯಕವಾದ ಫಾರಂನಲ್ಲಿ ನಾಲ್ಕು ಪ್ರತಿಗಳಲ್ಲಿ ದಿನಾಂಕ 8-2-79ನೇ ಗುರುವಾರ ಬೆಳಿಗ್ಗೆ 10 ಗಂಟೆವರೆಗೆ ಸ್ವೀಕರಿಸಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೆ ಪ್ರಚರಪಡಿಸಲಾಗಿದೆ.

ವಿದಾಯಕ ಟೆಂಡರು ಫಾರಂಗಳನ್ನು ಒಂದು ಲಾಟಿಗೆ 1 ರೂಪಾಯಿನಂತೆ ಈ ಕಛೇರಿಯಲ್ಲಿ ಹಣ ಪಾವತಿ ಮಾಡಿ ಪಡೆಯಲೂ ಬಹುದು. ಇನ್ನೂ ಹೆಚ್ಚಿನ ವಿವರಗಳು ಬೇಕಾದಲ್ಲಿ ಕಾರಾಗೃಹ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

(ಸಹಿ.) ಅಧೀಕ್ಷಕರು,
ಜಿಲ್ಲಾ ಕಾರಾಗೃಹ, ಮೈಸೂರು

123—10 ಬಿಡಿ ಪ್ರತಿಗಳು

ಹಿರಿಯ ಸಹಾಯಕ ಸಂಚಾಲಕರ ಕಛೇರಿ, ಪಶುಸಂವರ್ಧನಾ ಕ್ಷೇತ್ರ, ಅಜ್ಜಂಪುರ

ಹರಾಜು ಇಸ್ತಿಹಾರ್

ನೋಟಿಫಿಕೇಷನ್ CBS. STR. DJS. Auction/78-79 ದಿನಾಂಕ 8ನೇ ಜನವರಿ, 1979

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಈ ಮೇಲೆ ತಿಳಿಸಿರುವ ಪಶುಸಂವರ್ಧನಾ ಕ್ಷೇತ್ರಕ್ಕೆ ಸೇರಿದ ಸುಪೂರು 85 ಟಿಕ್ ಜೋಳದ ನಪ್ಪೆಯನ್ನು ದಿನಾಂಕ 30-1-1979ನೇ ಮಂಗಳವಾರ ಬೆಳಿಗ್ಗೆ 10-00 ಘಂಟೆಗೆ ಸದರಿ ಫಾರಂನ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ. ಇಚ್ಛೆಯುಳ್ಳವರು ಧಡಸವಾಲನಲ್ಲಿ ಭಾಗವಹಿಸಿ ಜೋಳದ ನಪ್ಪೆಯನ್ನು ಪಡೆಯತಕ್ಕದ್ದು.

ಷರತ್ತು ಮತ್ತು ಇತರ ಮಾಹಿತಿಗಳಿಗೆ ಮೇಲ್ಕಂಡ ಕಛೇರಿಯ ಕೆಲಸದ ವೇಳೆಯಲ್ಲಿ ತಿಳಿಯಬಹುದು.

(ಸಹಿ.) ಹಿರಿಯ ಸಹಾಯಕ ಸಂಚಾಲಕರು,
ಪಶುಸಂವರ್ಧನಾ ಕ್ಷೇತ್ರ, ಅಜ್ಜಂಪುರ.

110—100 ಬಿಡಿಪ್ರತಿಗಳು

ಹಿರಿಯ ಸಹಾಯಕ ಸಂಚಾಲಕರ ಕಛೇರಿ, ಪಶುಸಂವರ್ಧನಾ ಕ್ಷೇತ್ರ ಅಜ್ಜಂಪುರ,
ಪಶುಪಾಲನಾ ಮತ್ತು ಪಶು ಸಂಗೋಪನಾ ಇಲಾಖೆ (ಅಮೃತ ಮಹಲ್ ಶಾಖೆ)

ಅಮೃತ ಮಹಲ್ ದನಗಳ ಹರಾಜು ಇಸ್ತಿಹಾರ್

ನೋಟಿಫಿಕೇಷನ್ ನಂ. CBS. STR. AMC. Auction/78-79 dated .....

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ತಾರೀಖು 22-12-1978ನೇ ಶುಕ್ರವಾರದಂದು ನಡೆಸಬೇಕಾಗಿದ್ದ 77 ಅಮೃತ ಮಹಲ್ ದನಗಳ ಹರಾಜನ್ನು ಕಾರಣಾಂತರಗಳಿಂದ ಮುಂದೂಡಲಾಗಿದ್ದು, ಸದರಿ ಅಮೃತ ಮಹಲ್ ದನಗಳ ಹರಾಜನ್ನು ತಾರೀಖು 9-2-1979ನೇ ಶುಕ್ರವಾರ ಮಧ್ಯಾಹ್ನ 1-00 ಘಂಟೆಯಿಂದಾಗಾಗ್ಗು ಅವಶ್ಯವಿದ್ದಲ್ಲಿ ಮರುದಿನಗಳಲ್ಲೂ ಸಹ ತಿಪಟೂರು ತಾಲೂಕು ಹೊನ್ನವಳ್ಳಿ ರೋಡ್ ರೈಲ್ವೆ ಸ್ಟೇಷನ್ ಬಳಿಯಿರುವ ಬಿದಿರಮ್ಮನಗುಡಿ ಅಮೃತಮಹಲ್ ಕಾವಲಿನಲ್ಲಿ ಇಲಾಖಾ ಡೈರೆಕ್ಟರ್‌ರವರಿಂದಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಯವರಿಂದಾಗಲಿ ಬಹಿರಂಗವಾಗಿ ನಡೆಸಲ್ಪಡುತ್ತೆ. ಇಚ್ಛೆಯುಳ್ಳವರು ಈ ಮೇಲ್ಕಾಣಿಸಿದ ಹರಾಜಿನಲ್ಲಿ ಭಾಗವಹಿಸಿ ಜಾನುವಾರುಗಳನ್ನು ಪಡೆಯಬಹುದು.

ಷರತ್ತು ಮತ್ತು ಇತರೆ ಮಾಹಿತಿಗಳಿಗೆ ಹಿರಿಯ ಸಹಾಯಕ ಸಂಚಾಲಕರು, ಪಶುಸಂವರ್ಧನಾ ಕ್ಷೇತ್ರ, ಅಜ್ಜಂಪುರ, ಚಿಕ್ಕಮಗಳೂರು ಜಿಲ್ಲೆ ಇವರೊಂದಿಗೆ ಕಛೇರಿಯ ಕೆಲಸದ ವೇಳೆಯಲ್ಲಿ ವ್ಯವಹರಿಸಬಹುದು.

(ಸಹಿ) ಹಿರಿಯ ಸಹಾಯಕ ಸಂಚಾಲಕರು,
ಪಶು ಸಂವರ್ಧನಾ ಕ್ಷೇತ್ರ ಅಜ್ಜಂಪುರ.

109—100 ಬಿಡಿಪ್ರತಿಗಳು

ಮೈಸೂರು ಜಿಲ್ಲಾ ಕೃಷಿ ಉಪನಿರ್ದೇಶಕರ ಕಛೇರಿ, ಮೈಸೂರು

ಹರಾಜು ಮಾರಾಟದ ಪ್ರಕಟಣೆ

ನಂಬರ್ ಎಸಿಪಿ. ಸ್ಟೋರ್ಸ್ ಏ. ಎನ್. ವಿ. ಡಿಸ್‌ಪೊಸಲ್ 29-1 78-79 : ದಿನಾಂಕ 29ನೇ ಡಿಸೆಂಬರ್, 1978

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಈ ಆಫೀಸಿಗೆ ಸೇರಿದ ಉಪಯೋಗಕ್ಕೆ ದಾರದೆಂದು ಪರಿಗಣಿಸಲ್ಪಟ್ಟ ಪರ್ನಿಚರ್ ಮತ್ತು ಇತರ ವಸ್ತುಗಳನ್ನು ದಿನಾಂಕ 7-2-1979 ರಂದು ಮಧ್ಯಾಹ್ನ 3-30 ಗಂಟೆಗೆ ಈ ಆಫೀಸಿನ ಆವರಣದಲ್ಲಿ ಹಿಂದಿನ ಪ್ಯಾಲೆಸ್ ಆಫೀಸ್ ಕಟ್ಟಡದಲ್ಲಿದೆ) ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಈ ಹರಾಜನ್ನು ಈ ಕೆಳಗೆ ಸಹಿಮಾಡಿರುವವರಿಂದಾಗಲೀ ಅವರಿಂದ ನಿಯಮಿಸಲ್ಪಟ್ಟ ಇತರ ಅಧಿಕಾರಿಯಿಂದಾಗಲೀ ನಡೆಸಲಾಗುವುದು.

ಹರಾಜು ವಿಲೇವಾರಿಯ ನಿಯಮಗಳು ಮತ್ತು ಹರಾಜು ಮಾಡಲಿರುವ ಪರ್ನಿಚರ್ ಮತ್ತು ಇತರ ಸಾಮಾನುಗಳ ಪಟ್ಟಿಯನ್ನು ಇದೇ ಆಫೀಸಿನಲ್ಲಿ ಆಫೀಸು ವೇಳೆಯಲ್ಲಿ ಪರಿಶೀಲಿಸಬಹುದು.

(ಸಹಿ.) ಕೃಷಿ ಉಪನಿರ್ದೇಶಕರು,
ಮೈಸೂರು ಜಿಲ್ಲೆ, ಮೈಸೂರು.

100—30 ಬಿಡಿಪ್ರತಿಗಳು